KAMD310018312023

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಮದ್ದೂರು
ಉಪಸ್ಥಿತರು :

ಶ್ರೀಮತಿ ನಳಿನ ಎಸ್.ಸಿ., ಬಿ.ಎ ಎಲ್.ಎಲ್.ಬಿ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಮದ್ದೂರು

**ದಿನಾಂಕ: 2 ನೇ ಏಪ್ರಿಲ್ 2026**
**ಅಪರಾಧಿಕ ಪ್ರಕರಣ ಸಂಖ್ಯೆ: 992/2023**

ಫಿರ್ಯಾದಿದಾರರು - ಕರ್ನಾಟಕ ರಾಜ್ಯದ ಪರವಾಗಿ
ಮದ್ದೂರು ಸಂಚಾರಿ ಪೊಲೀಸ್ ಠಾಣೆ.

(ಸರ್ಕಾರದ ಪರವಾಗಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)

- ವಿರುದ್ಧ -

ಆರೋಪಿಗಳು - ಲಕ್ಷ್ಮಿನಾರಾಯಣಗೌಡ ಬಿನ್ ಚಲುವೇಗೌಡ,
24 ವರ್ಷ, ವಾಸಃ ದಾಸರಕೊಪ್ಪಲು ಗ್ರಾಮ,
ಚನ್ನಕೇಶ್ವರ ನಿಲಯ, 2 ನೇ ಜಯನಗರ,
ಹಾಸನ ಸಿಟಿ, ಹಾಸನ.

(ಶ್ರೀ.ಕೆ.ಬಿ.ಎನ್., ವಕೀಲರು)

1. ಘಟನೆ ನಡೆದ ದಿನಾಂಕ 25-03-2023.
2. ಅಪರಾಧ ವರದಿಗೊಂಡ ದಿನಾಂಕ 26-03-2023.
3. ಆಪಾದಿಸಲಾದ ಅಪರಾಧದ ಕಾಯ್ದೆಗಳು ಭಾ.ದಂ.ಸಂ.ಕಲಂ. ಕಲಂ.279, ಮತ್ತು 304
4. ಸಾಕ್ಷಿ ವಿಚಾರಣೆ ಪ್ರಾರಂಭಗೊಂಡ ದಿನಾಂಕ 25-11-2025.
5. ಸಾಕ್ಷಿ ವಿಚಾರಣೆ ಮುಕ್ತಾಯಗೊಂಡ ದಿನಾಂಕ 29-12-2025.

6. ನ್ಯಾಯಾಧೀಶರ ತೀರ್ಮಾನ ನಿರ್ದೋಷಿಯೆಂದು ಪರಿಗಣಿಸಿದೆ
7. ತೀರ್ಮಾನವಾದ ದಿನಾಂಕ 02.04.2026

8. ಅವಧಿ

| ವರ್ಷ | ತಿಂಗಳು | ದಿನಗಳು |
|---|---|---|
| 03 | 03 | 07 |

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಮದ್ದೂರು.

## ತೀರ್ಪು

ಮದ್ದೂರು ಸಂಚಾರಿ ಪೊಲೀಸ್ ಠಾಣೆ, ಪಿ.ಎಸ್.ಐ.ರವರು ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ.279 ಮತ್ತು 304 ಎ ಕಾಯಿದೆ ರಡಿಯಲ್ಲಿನ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ:-

ದಿನಾಂಕ:25-03-2023 ರಂದು ಸಂಜೆ 4-15 ಗಂಟೆ ಸಮಯದಲ್ಲಿ ಮದ್ದೂರು ಸಂಚಾರಿ ಪೊಲೀಸ್ ಠಾಣಾ ಸರಹದ್ದಿನ, ಮೈಸೂರು-ಬೆಂಗಳೂರು ಹೆದ್ದಾರಿ ರಸ್ತೆಯ ಗೆಜ್ಜಲಗೆರೆ ಅಂಬರ ರೆಸಾರ್ಟ್ ನೇರದಲ್ಲಿ ಆರೋಪಿಯು ಚಾಸಾ-10 ರವರ ಬಾಬ್ತು ಕೆಎ-50-ವಿ-1128 ರ ಬಜಾಜ್ ಪಲ್ಸರ್ ಆರ್.ಎಸ್.200 ಬೈಕ್ ಹಿಂಭಾಗ ಈ ಕೇಸಿನ ಮೃತೆ ಪ್ರಿಯಾಂಕ.ಆರ್.ರವರನ್ನು ಕೂರಿಸಿಕೊಂಡು ಮೈಸೂರು ಕಡೆಯಿಂದ ಬೆಂಗಳೂರು ಕಡೆಗಾದಂತೆ ಅತೀವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಹೋಗಿ ತನ್ನ ಮುಂದೆ ಹೋಗುತ್ತಿದ್ದ ಯಾವುದೋ ಒಂದು ವಾಹನಕ್ಕೆ ಅಪಘಾತ ಮಾಡುವುದನ್ನು

ತಪ್ಪಿಸಲು ಸಡನ್ನಾಗಿ ಬ್ರೇಕ್ ಹಾಕಿದ್ದರಿಂದ ಬೈಕ್ ಆರೋಪಿಯ ನಿಯಂತ್ರಣ ತಪ್ಪಿ ಆರೋಪಿ ಮತ್ತು ಪ್ರಿಯಾಂಕರವರು ಬೈಕ್ ಸಮೇತ ಕೆಳಗಡೆ ಬಿದ್ದು ಪ್ರಿಯಾಂಕರವರ ತಲೆಗೆ ಹಾಗೂ ಇತರೆ ಕಡೆ ತೀವ್ರ ಸ್ವರೂಪದ ಪೆಟ್ಟುಗಳಾಗಿ ಸ್ಥಳದಲ್ಲೆಯೇ ಮೃತಪಟ್ಟಿರುವುದಾಗಿ ಆರೋಪಿ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

3. ಆರೋಪಿ ತನ್ನ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಈ ನ್ಯಾಯಾಲಯದಿಂದ ಜಾಮೀನನ್ನು ಪಡೆದುಕೊಂಡಿರುತ್ತಾರೆ.

4. ತನಿಖಾಧಿಕಾರಿಗಳು ತನಿಖಾ ಕಾರ್ಯವನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷರೋಪಣ ಪಟ್ಟಿಯನ್ನು ಸಲ್ಲಿಸಿದ್ದು, ನ್ಯಾಯಾಲಯ ಭಾರತೀಯ ದಂಡ ಸಂಹಿತೆಯ ಕಲಂ.279 ಮತ್ತು 304 ಎ ಕಾಯಿದೆ ರಡಿಯಲ್ಲಿನ ಅಪರಾಧಕ್ಕೆ ಸಂಜ್ಞೇಯತೆಯನ್ನು ತೆಗೆದುಕೊಂಡಿರುತ್ತದೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಂತೆ ಆರೋಪಿಗೆ ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

5. ಆರೋಪಿ ವಿರುದ್ಧ ಆಪಾದನೆಯನ್ನು ರಚಿಸಿ, ಓದಿ, ಆರೋಪಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಿ ಹೇಳಿದ್ದು ಆರೋಪಿತರು ತಾವು ತಪ್ಪನ್ನು ಮಾಡಿರುವುದಿಲ್ಲ, ವಿಚಾರಣೆಯಾಗಬೇಕೆಂದು ಉತ್ತರಿಸಿರುತ್ತಾರೆ.

6. ಅಭಿಯೋಜನೆಯು ಆರೋಪಿ ವಿರುದ್ಧ ಮಾಡಿರುವ ಆರೋಪಗಳನ್ನು ಸಂದೇಹಾತೀತವಾಗಿ ರುಜುವಾತು ಪಡಿಸಲು ತಮ್ಮ ಪರವಾಗಿ ಸಾಕ್ಷಿದಾರರನ್ನು ಫ್ರಾಸಾ-1 ರಿಂದ 4 ಎಂದು ವಿಚಾರಣೆಗೆ ಒಳಪಡಿಸಿ ನಿಪಿ-1 ರಿಂದ 20 ಎಂಬ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಆರೋಪಿ ವಿರುದ್ಧ 313 ಹೇಳಿಕೆಯನ್ನು

ದಾಖಲಿಸಲಾಯಿತು. ನಂತರ ಈ ಪ್ರಕರಣವನ್ನು ಮುಂದಿನ ಹಂತವಾದ ವಾದ ಮಂಡನೆಗಾಗಿ ಮುಂದೂಡಲಾಯಿತು.

7. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ಈ ಮೊಕದ್ದಮೆಗೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಲಾಯಿತು.

8. ಅಭಿಯೋಜನೆಯು ಆರೋಪಿ ವಿರುದ್ದ ಮಾಡಿರುವ ಆರೋಪಗಳ ರೀತ್ಯ ಈ ನ್ಯಾಯಾಲಯದ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

**ಅಂಶ ಸಂಖ್ಯೆ.1.** ದಿನಾಂಕಃ25-03-2023 ರಂದು ಸಂಜೆ 4-15 ಗಂಟೆ ಸಮಯದಲ್ಲಿ ಮದ್ದೂರು ಸಂಚಾರಿ ಪೊಲೀಸ್ ಠಾಣಾ ಸರಹದ್ದಿನ, ಮೈಸೂರು-ಬೆಂಗಳೂರು ಹೆದ್ದಾರಿ ರಸ್ತೆಯ ಗೆಜ್ಜಲಗೆರೆ ಅಂಬರ ರೆಸಾರ್ಟ್ ನೇರದಲ್ಲಿ ಆರೋಪಿಯು ಚಾಸಾ-10 ರವರ ಬಾಬ್ತು ಕೆಎ-50-ವಿ-1128 ರ ಬಜಾಜ್ ಪಲ್ಸರ್ ಆರ್.ಎಸ್.200 ಬೈಕ್ ಹಿಂಭಾಗ ಈ ಕೇಸಿನ ಮೃತೆ ಪ್ರಿಯಾಂಕ.ಆರ್.ರವರನ್ನು ಕೂರಿಸಿಕೊಂಡು ಮೈಸೂರು ಕಡೆಯಿಂದ ಬೆಂಗಳೂರು ಕಡೆಗಾದಂತೆ ಅತೀವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಹೋಗಿ ತನ್ನ ಮುಂದೆ ಹೋಗುತ್ತಿದ್ದ ಯಾವುದೋ ಒಂದು ವಾಹನಕ್ಕೆ ಅಪಘಾತ ಮಾಡುವುದನ್ನು ತಪ್ಪಿಸಲು ಸಡನ್ನಾಗಿ ಬ್ರೇಕ್ ಹಾಕಿದ್ದರಿಂದ ಬೈಕ್ ಆರೋಪಿಯ ನಿಯಂತ್ರಣ ತಪ್ಪಿ ಆರೋಪಿ ಮತ್ತು ಪ್ರಿಯಾಂಕರವರು ಬೈಕ್ ಸಮೇತ ಕೆಳಗಡೆ ಬಿದ್ದಿದ್ದು, ಆ ಮೂಲಕ ಆರೋಪಿಯು ಭಾ.ದಂ.ಸಂ.ಕಲಂ 279 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ?

**<u>ಅಂಶ ಸಂಖ್ಯೆ.2.</u>** ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯು ಮೇಲ್ಕಂಡಂತೆ ಅಪಘಾತವನ್ನುಂಟು ಮಾಡಿದ್ದರಿಂದ ಪ್ರಿಯಾಂಕರವರ ತಲೆಗೆ ಹಾಗೂ ಇತರೆ ಕಡೆ ತೀವ್ರ ಸ್ವರೂಪದ ಪೆಟ್ಟುಗಳಾಗಿ ಸ್ಥಳದಲ್ಲೆಯೇ ಮೃತಪಟ್ಟಿದ್ದು, ಆ ಮೂಲಕ ಭಾರತ ದಂಡ ಸಂವೃತೆ ಕಲಂ.304(ಎ) ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ?

**<u>ಅಂಶ ಸಂಖ್ಯೆ.3.</u>** ಯಾವ ಆದೇಶ?

9. ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

ಅಂಶ-1 - ನಕಾರಾತ್ಮಕವಾಗಿ
ಅಂಶ-2 - ನಕಾರಾತ್ಮಕವಾಗಿ
ಅಂಶ-3 - ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗಾಗಿ

<u>:: ಕಾರಣಗಳು ::</u>

10. **<u>ಅಂಶ-1 ಮತ್ತು 2-</u>** 1 ಮತ್ತು 2 ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಮತ್ತು ಒಂದರ ಅಂಶದ ಮೇಲಿನ ಚರ್ಚೆಯು ಇನ್ನುಳಿದ ಅಂಶಗಳಲ್ಲಿನ ಚರ್ಚೆಯಲ್ಲಿ ಪುನರಾವರ್ತನೆಯಾಗುವ ಕಾರಣಕ್ಕಾಗಿ ಸದರಿ ಎಲ್ಲ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

11. ದಿನಾಂಕ:25-03-2023 ರಂದು ಸಂಜೆ 4-15 ಗಂಟೆ ಸಮಯದಲ್ಲಿ ಮದ್ದೂರು ಸಂಚಾರಿ ಪೊಲೀಸ್ ಠಾಣಾ ಸರಹದ್ದಿನ, ಮೈಸೂರು-ಬೆಂಗಳೂರು ಹೆದ್ದಾರಿ ರಸ್ತೆಯ ಗೆಜ್ಜಲಗೆರೆ ಅಂಬರ ರೆಸಾರ್ಟ್ ನೇರದಲ್ಲಿ ಆರೋಪಿಯು ಚಾಸಾ-10 ರವರ ಬಾಬ್ತು

ಕೆಎ-50-ವಿ-1128 ರ ಬಜಾಜ್ ಪಲ್ಸರ್ ಆರ್.ಎಸ್.200 ಬೈಕ್ ಹಿಂಭಾಗ ಈ ಕೇಸಿನ ಮೃತೆ ಪ್ರಿಯಾಂಕ.ಆರ್.ರವರನ್ನು ಕೂರಿಸಿಕೊಂಡು ಮೈಸೂರು ಕಡೆಯಿಂದ ಬೆಂಗಳೂರು ಕಡೆಗಾದಂತೆ ಅತೀವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಹೋಗಿ ತನ್ನ ಮುಂದೆ ಹೋಗುತ್ತಿದ್ದ ಯಾವುದೋ ಒಂದು ವಾಹನಕ್ಕೆ ಅಪಘಾತ ಮಾಡುವುದನ್ನು ತಪ್ಪಿಸಲು ಸಡನ್ನಾಗಿ ಬ್ರೇಕ್ ಹಾಕಿದ್ದರಿಂದ ಬೈಕ್ ಆರೋಪಿಯ ನಿಯಂತ್ರಣ ತಪ್ಪಿ ಆರೋಪಿ ಮತ್ತು ಪ್ರಿಯಾಂಕರವರು ಬೈಕ್ ಸಮೇತ ಕೆಳಗಡೆ ಬಿದ್ದು ಪ್ರಿಯಾಂಕರವರ ತಲೆಗೆ ಹಾಗೂ ಇತರೆ ಕಡೆ ತೀವ್ರ ಸ್ವರೂಪದ ಪೆಟ್ಟುಗಳಾಗಿ ಸ್ಥಳದಲ್ಲೆಯೇ ಮೃತಪಟ್ಟಿರುವುದಾಗಿ ಆರೋಪಿ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

12. ಚಾಸಾ-1/ಪ್ರಾಸಾ-1 ಪ್ರದೀಪ್.ಆರ್. ಪಿರ್ಯಾದುದಾರರಾಗಿದ್ದು, ತಮ್ಮ ಸಾಕ್ಷ್ಯದಲ್ಲಿ ಮೃತ ಪ್ರಿಯಾಂಕ ತನ್ನ ಸಹೋದರಿ ಎಂದು, ದಿನಾಂಕಃ 25-03-2023 ರಂದು ಸಂಜೆ 4.45 ರ ಸಮಯದಲ್ಲಿ ಗೆಜ್ಜಲೆಗೆರೆ ರಾಷ್ಟ್ರೀಯ ಹೆದ್ದಾರಿಯಲ್ಲಿ ತನ್ನ ಸಹೋದರಿಗೆ ಅಪಘಾತವಾಗಿದೆ ಎಂದು 3 ನೇ ವ್ಯಕ್ತಿಯು ತನಗೆ ಕರೆ ಮಾಡಿ ತಿಳಿಸಿರುತ್ತಾರೆ ಎಂದು, ಸದರಿ ವೇಳೆಯಲ್ಲಿ ತಾನು ಊಟಿಯಲ್ಲಿದ್ದೆ ಎಂದು, ತಾನು ಮಧ್ಯರಾತ್ರಿ 11.00-12.00 ಗಂಟೆ ಅವಧಿಗೆ ಮದ್ದೂರಿಗೆ ಬಂದಿರುತ್ತೇನೆ ಎಂದು, ಸದರಿ ವೇಳೆಯಲ್ಲಿ ತನ್ನ ಸಹೋದರಿ ಸ್ಥಳದಲ್ಲಿ ಮರಣ ಹೊಂದಿರುವುದಾಗಿ ತಿಳಿದಿದ್ದು, ತಾನು ಆಕೆಯನ್ನು ಶವಗಾರದಲ್ಲಿ ನೋಡಿ ನಿಪಿ-1 ರಂತೆ ದೂರನ್ನು ದಾಖಲಿಸಿರುತ್ತೇನೆ ಎಂದು, ಸದರಿ ಅಪಘಾತ, ಹೇಗೆ, ಯಾರಿಂದ ಎಲ್ಲಿ ಯಾವಾಗ ಆಗಿದೆ ಎಂದು ತನಗೆ ಗೊತ್ತಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

13. ಚಾಸಾ-2/ಪ್ರಾಸಾ-2 ಚೇತನ್, ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ಮೃತ ಪ್ರಿಯಾಂಕ ತನಗೆ ಗೊತ್ತಿಲ್ಲ ಎಂದು, ಆರೋಪಿಯನ್ನು ತಾನು ನೋಡಿಲ್ಲ ಎಂದು, ತಾನು ಯಾವುದೇ ಅಪಘಾತವನ್ನು ನೋಡಿಲ್ಲ, ಯಾವುದೇ ಹೇಳಿಕೆ ನೀಡಿಲ್ಲ ಎಂದು, ಅಮಾನತ್ತು ಮಹಜರ್ ಮತ್ತು ಸ್ಥಳ ಮಹಜರ್ ಗಳಲ್ಲಿ ತನ್ನ ಸಹಿಯನ್ನು ನಿಪಿ-2 ಎ ಮತ್ತು ನಿಪಿ-3 ಎ ಎಂದು ಗುರುತಿಸಿಕೊಂಡು, ಸದರಿ ದಾಖಲೆಗಳಿಗೆ ತನ್ನನ್ನು ಹೊರತುಪಡಿಸಿ ಬೇರೆಯಾರು ಸಹಿ ಮಾಡಿದ್ದರೆಂದು ತನಗೆ ಗೊತ್ತಿಲ್ಲ ಎಂದು, ಸದರಿ ದಾಖಲೆಗಳಲ್ಲಿ ಏನು ಬರೆದಿದ್ದಾರೆಂದು ತನಗೆ ಗೊತ್ತಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

14. ಚಾಸಾ-17/ಪ್ರಾಸಾ-3 ಸಂತೋಷ್.ಎಸ್., ಸಿಪಿಐರವರು, ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ28-03-2023 ರಂದು ಈ ಕೇಸಿನ ಕಡತವನ್ನು ಚಾಸಾ-16 ರವರಿಂದ ಪಡೆದುಕೊಂಡು ಪರಿಶೀಲಿಸಿ, ದಿನಾಂಕಃ20-04-2023 ರಂದು ಮದ್ದೂರು ಸಾರ್ವಜನಿಕ ಆಸ್ಪತ್ರೆಯಿಂದ ನಿಪಿ-10 ರಂತೆ ಪಿ.ಎಂ. ವರದಿ ಪಡೆದುಕೊಂಡು, ದಿನಾಂಕಃ09-06-2023 ರಂದು ಆರೋಪಿಯ ವಿರುದ್ಧ ಆರೋಪ ಸಾಬೀತಾದ ಕಾರಣ ಅವರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ತಮ್ಮ ಸಾಕ್ಷವನ್ನು ನುಡಿದಿರುತ್ತಾರೆ.

15. ಚಾಸಾ-16/ಪ್ರಾಸಾ-4 ಸಿದ್ದರಾಜು.ಆರ್., ಪಿ.ಐ., ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ26-03-2023 ರಂದು ಬೆಳಿಗ್ಗೆ 6.10 ಗಂಟೆ ಸಮಯದಲ್ಲಿ ತಾನು ಠಾಣಾ

ಪ್ರಭಾರ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ಕೊಟ್ಟ ಲಿಖಿತ ದೂರನ್ನು ಸ್ವೀಕರಿಸಿ, ಪ್ರಕರಣ ದಾಖಲು ಮಾಡಿ, ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಹಿರಿಯಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ ಎಂದು, ಅದೇ ದಿನ ಅಪಘಾತದ ಸ್ಥಳಕ್ಕೆ ಬೇಟಿ ನೀಡಿ ಚಾಸಾ 3 ರವರು ತೋರಿಸಿದ ಸ್ಥಳದಲ್ಲಿ ಬೆಳಿಗ್ಗೆ 11.20 ರಿಂದ 12.20 ರ ಸಮಯದಲ್ಲಿ ಚಾಸಾ 3 , 4 ರ ಸಮಕ್ಷಮ ನಿಪಿ 3 ರಂತೆ ಸ್ಥಳ ಪಂಚನಾಮೆ ಮಾಡಿರುತ್ತೇನೆ ಎಂದು, ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-9 ರವರಿಗೆ ವರ್ಗಾಯಿಸಿರುತ್ತೇನೆ ಎಂದು ತಮ್ಮ ಸಾಕ್ಷವನ್ನು ನುಡಿದಿರುತ್ತಾರೆ.

16. ಅಪಘಾತ ಪ್ರಕರಣಗಳಲ್ಲಿ ಅಭಿಯೋಜನೆಯು ಈ ಕೆಳಗಿನ ಅಂಶಗಳನ್ನು ರುಜುವಾತುಪಡಿಸಬೇಕಾಗಿರುತ್ತದೆ.

1) ಆರೋಪಿರವರು ಅತೀವೇಗ ಹಾಗೂ ಅಜಾಗರೂಕತೆಯಿಂದ ವಾಹನವನ್ನು ಚಲಾಯಿಸಿರುವ ಬಗ್ಗೆ

2) ಆರೋಪಿ ರವರು ಮಾನವ ಜೀವಕ್ಕೆ ಹಾನಿಯಾಗುವ ರೀತಿ ವಾಹನವನ್ನು ಚಲಾಯಿಸಿರುತ್ತಾರೆ ಎನ್ನುವ ಬಗ್ಗೆ

3) ಆರೋಪಿ ರವರು ಅಜಾಗರೂಕತೆ ಹಾಗೂ ನಿರ್ಲಕ್ಷತನದಿಂದ ಪ್ರಿಯಾಂಕ-ಆರ್. ಎಂಬುವರು ಮೃತಪಟ್ಟಿರುತ್ತಾರೆ ಎನ್ನುವ ಬಗ್ಗೆ

17. ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿದಂತಹ ತನಿಖಾಧಿಕಾರಿಗಳನ್ನು ಹೊರತುಪಡಿಸಿ, ಉಳಿದಂತೆ ಚಾಸಾ-1 ರವರು ಪಿರ್ಯಾದುದಾರರಾಗಿದ್ದು, ಮೃತ ಪ್ರಿಯಾಂಕ ತನ್ನ ಸಹೋದರಿ ಎಂದು, ದಿನಾಂಕಃ 25-03-2023 ರಂದು ಸಂಜೆ 4.45 ರ ಸಮಯದಲ್ಲಿ ಗೆಜ್ಜಲಗೆರೆ ರಾಷ್ಟ್ರೀಯ ಹೆದ್ದಾರಿಯಲ್ಲಿ ತನ್ನ ಸಹೋದರಿಗೆ ಅಪಘಾತವಾಗಿದೆ ಎಂದು 3 ನೇ ವ್ಯಕ್ತಿಯು ತನಗೆ ಕರೆ ಮಾಡಿ ತಿಳಿಸಿರುತ್ತಾರೆ ಎಂದು, ಸದರಿ ಅಪಘಾತ, ಹೇಗೆ, ಯಾರಿಂದ

ಎಲ್ಲಿ ಯಾವಾಗ ಆಗಿದೆ ಎಂದು ತನಗೆ ಗೊತ್ತಿಲ್ಲ ಎಂದು ಅಭಿಯೋಜನೆಗೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

18. ಇನ್ನು ಉಳಿದಂತೆ ಚಾಸಾ-3 ಮಹಜರ್ ಸಾಕ್ಷಿದಾರರಾಗಿದ್ದು ಅಭಿಯೋಜನೆಯವರಿಗೆ ಅನುಕೂಲವಾಗುವಂತೆ ಯಾವುದೇ ಸಾಕ್ಷ್ಯವನ್ನು ನುಡಿಯದೇ ತಮ್ಮ ಸಹಿಯನ್ನು ಬಿಟ್ಟು ಅಭಿಯೋಜನೆಗೆ ಅನುಕೂಲವಾಗುವಂತಹ ಯಾವುದೇ ಹೇಳಿಕೆಯನ್ನು ನುಡಿದಿರುವುದಿಲ್ಲ. ಆದ್ದರಿಂದ ಸದರಿ ಸಾಕ್ಷಿದಾರರ ಸಾಕ್ಷ್ಯವು ಅಭಿಯೋಜನೆಗೆ ಪ್ರಕರಣ ಸಾಬೀತುಪಡಿಸಲು ಸಹಾಯ ಮಾಡುವುದಿಲ್ಲ. ಆದ್ದರಿಂದ ಆರೋಪಿ ಮೇಲ್ಕಂಡ ಅಪರಾಧ ಮಾಡಿರುತ್ತಾರೆ ಎಂಬ ತೀರ್ಮಾನಕ್ಕೆ ಬರಲಾಗದು. ಅಪಘಾತ ಪ್ರಕರಣದಲ್ಲಿ ಅಭಿಯೋಜನೆಯು ಚಾಲಕನ ಅಜಾಗರೂಕತೆ ಹಾಗೂ ನಿರ್ಲಕ್ಷತನದಿಂದ ಅಪಘಾತಾಗಿರುತ್ತದೆ ಎಂಬ ಎರಡು ಅಂಶವನ್ನು ರುಜುವಾತು ಪಡಿಸಬೇಕಾಗುತ್ತದೆ. ಆದರೆ, ಈ ಪ್ರಕರಣದಲ್ಲಿ ಮಹಜರ್ ಸಾಕ್ಷಿದಾರರು ಮತ್ತು ದೂರುದಾರರು ಯಾರು ಕೂಡ ಪ್ರತ್ಯಕ್ಷದರ್ಶಿಯಾಗಿರದ ಕಾರಣ ಮತ್ತು ಚಾಸಾ-1 ರವರು ಮೃತ ಪ್ರಿಯಾಂಕ.ಆರ್. ರವರ ಪರಿಚಯಸ್ಥರಾಗಿರುವುದರಿಂದ ಸದರಿಯವರ ಸಾಕ್ಷ್ಯವು ಹಿತಾಶಕ್ತಿ ಸಾಕ್ಷ್ಯವಾಗಿದ್ದು, ಅಭಿಯೋಜನೆಯು ಆರೋಪಿಯ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಎಂದು ಸಂಶಯಾತೀತವಾಗಿ ರುಜುವಾತು ಪಡಿಸಲು ವಿಫಲವಾಗಿದೆ ಎಂದು ಪರಿಗಣಿಸಿ ಅಂಶ **1** ಮತ್ತು **2** ನ್ನು ನಕಾರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.

19. **ಅಂಶ ನಂ.3** :- ಈ ಮೇಲ್ಕಂಡ ಕಾರಣಗಳಿಂದಾಗಿ ಈ ಅಂಶವನ್ನು ಕೆಳಕಂಡಂತೆ ಆದೇಶ ಮಾಡುತ್ತೇನೆ.

## **::ಆದೇಶ ::**

ದಂಡ ಪ್ರಕ್ರಿಯಾ ಸಂಹಿತೆ ಕಲಂ.255(1)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿ ವಿರುದ್ಧ ಮಾಡಲಾದ ಭಾರತೀಯ ದಂಡ ಸಂಹಿತೆಯ ಕಲಂ.279 ಮತ್ತು 304 ಎ ರಡಿಯಲ್ಲಿನ ಆರೋಪಗಳಿಂದ ಆರೋಪಿಯನ್ನು ಈ ಮೊಕದ್ದಮೆಯಿಂದ ಖುಲಾಸೆಗೊಳಿಸಲಾಗಿದೆ.

ಆರೋಪಿ ಮತ್ತು ಜಾಮೀನುದಾರರು ಬರೆದು ಕೊಟ್ಟಿರುವ ಜಾಮೀನು ಮುಚ್ಚಳಿಕೆಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 436 ಪ್ರಕಾರ ಈ ದಿನದಿಂದ ಮುಂದಿನ 6 ತಿಂಗಳ ವರೆಗೆ ಚಾಲ್ತಿಯಲ್ಲಿರುತ್ತದೆ.

ಪ್ರಸ್ತುತ ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ ವಾಹನ ಸಂಖ್ಯೆ ಕೆಎ-50-ವಿ-1128 ಬಜಾಜ್ ಪಲ್ಸರನ್ನು ಇಂಡಿಮ್ನಿಟಿ ಬಾಂಡ್ ನ ಮೂಲಕ ಬಿಡುಗಡೆಗೊಳಿಸಲಾಗಿದ್ದು, ಮೇಲ್ಮನವಿ ಅವಧಿ ಮುಗಿದ ನಂತರ ಸದರಿ ಆದೇಶವನ್ನು ಖಾಯಂಗೊಳಿಸಲಾಗಿದೆ.

*(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ನೀಡಿ, ಬೆರಳಚ್ಚು ಮಾಡಿದ ನಂತರ ಅದನ್ನು ತಿದ್ದಿ ಪರಿಷ್ಕರಿಸಿ ದಿನಾಂಕ 2 ನೇ ಏಪ್ರಿಲ್ 2026 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.)*

**( ನಳಿನ ಎಸ್.ಸಿ.)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಮದ್ದೂರು.

## ಅನುಬಂಧ

1. ಅಭಿಯೋಜನಾ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ.

ಪ್ರಾ.ಸಾ-1 - ಪ್ರದೀಪ್.
ಪ್ರಾ.ಸಾ-2 - ಚೇತನ್.
ಪ್ರಾ.ಸಾ-3 - ಸಂತೋಷ.

ಫ್ರಾ.ಸಾ-4 - ಸಿದ್ದರಾಜು.

2. <u>ಅಭಿಯೋಜನೆಯ ಪರ ಗುರುತಿಸಲ್ಪಟ್ಟ ದಾಖಲೆಗಳ ವಿವರ :</u>

| | | |
|---|---|---|
| ನಿಪಿ-1 | - | ದೂರು. |
| ನಿಪಿ-1(ಎ) | - | ಫ್ರಾಸಾ-1 ರವರ ಸಹಿ. |
| ನಿಪಿ-1(ಬಿ) | - | ಫ್ರಾಸಾ-4 ರವರ ಸಹಿ. |
| ನಿಪಿ-2 | - | ಅಮಾನತ್ತು ಮಹಜರ್. |
| ನಿಪಿ-2(ಎ) | - | ಫ್ರಾಸಾ-2 ರವರ ಸಹಿ. |
| ನಿಪಿ-2(ಬಿ) | - | ಫ್ರಾಸಾ-4 ರವರ ಸಹಿ. |
| ನಿಪಿ-3 | - | ಸ್ಥಳ ಮಹಜರ್. |
| ನಿಪಿ-3(ಎ) | - | ಫ್ರಾಸಾ-2 ರವರ ಸಹಿ. |
| ನಿಪಿ-3(ಬಿ) | - | ಫ್ರಾಸಾ-4 ರವರ ಸಹಿ. |
| ನಿಪಿ-4 ರಿಂದ 7 | - | ಫೋಟೋಗಳು. |
| ನಿಪಿ-8 | - | ಫ್ರಾಸಾ-2 ರವರ ಹೇಳಿಕೆ. |
| ನಿಪಿ-9 | - | ಶವ ತನಿಖಾ ವರದಿ. |
| ನಿಪಿ-9(ಎ) | - | ಫ್ರಾಸಾ-4 ರವರ ಸಹಿ. |
| ನಿಪಿ-10 | - | ಶವ ಪರೀಕ್ಷಾ ವರದಿ. |
| ನಿಪಿ-10(ಎ) | - | ಫ್ರಾಸಾ-3 ರವರ ಸಹಿ. |
| ನಿಪಿ-11 | - | ಐಎಂವಿ ವರದಿ. |
| ನಿಪಿ-11(ಎ) | - | ಫ್ರಾಸಾ-3 ರವರ ಸಹಿ. |
| ನಿಪಿ-12 | - | ಗಾಯದ ಪ್ರಮಾಣ ಪತ್ರ. |
| ನಿಪಿ-12(ಎ) | - | ಫ್ರಾಸಾ-3 ರವರ ಸಹಿ. |
| ನಿಪಿ-13 | - | ಎಂ.ಎಲ್.ಸಿ.ವರದಿ. |
| ನಿಪಿ-13(ಎ) | - | ಫ್ರಾಸಾ-3 ರವರ ಸಹಿ. |
| ನಿಪಿ-14 | - | ಕಲಂ.133 ಮೋಟಾರ್ ವಾಹನ ಕಾಯ್ದೆ ರೀತ್ಯಾ ನೋಟೀಸ್. |
| ನಿಪಿ-14(ಎ) | - | ಫ್ರಾಸಾ-3 ರವರ ಸಹಿ. |
| ನಿಪಿ-15 | - | ಕಲಂ.133 ರೀತ್ಯಾ ನೋಟೀಸ್ ಗೆ ಉತ್ತರ. |
| ನಿಪಿ-15(ಎ) | - | ಫ್ರಾಸಾ-3 ರವರ ಸಹಿ. |
| ನಿಪಿ-16 | - | ಇಂಡಿಮ್ನಿಟಿ ಬಾಂಡ್. |
| ನಿಪಿ-16(ಎ) | - | ಫ್ರಾಸಾ-3 ರವರ ಸಹಿ. |
| ನಿಪಿ-17 | - | ಪ್ರಥಮ ವರ್ತಮಾನ ವರದಿ. |
| ನಿಪಿ-17 ಎ | - | ಫ್ರಾಸಾ-4 ರವರ ಸಹಿ. |
| ನಿಪಿ-18 ಮತ್ತು 19 | - | ಫೋಟೋಗಳು. |
| ನಿಪಿ-20 | - | ನಕಾಶೆ. |

3. <u>ಅಭಿಯೋಜನಾ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ವಿವರ:</u>

- ಇಲ್ಲಾ -

4. ಆರೋಪಿತರ ಪರ ಗುರುತಿಸಲ್ಪಟ್ಟ ದಾಖಲೆಗಳ ವಿವರ :

- ಇಲ್ಲಾ -

5. ಅಭಿಯೋಜನೆಯು ಗುರುತಿಸಿರುವ ಮುದ್ದೆ ಮಾಲುಗಳ ಪಟ್ಟಿ

- ಇಲ್ಲಾ -

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಮದ್ದೂರು.